**A**

**CCE RF**
**CCE RR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2020**

**S.S.L.C. EXAMINATION, MARCH / APRIL, 2020**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 27. 03. 2020 ] **ಸಂಕೇತ ಸಂಖ್ಯೆ : 01-K**

Date : 27. 03. 2020 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 6 × 1 = 6 |
| 1. | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.<br>(ಎ) ಅರ್ಧವಿರಾಮ (ಬಿ) ಅಲ್ಪವಿರಾಮ<br>(ಸಿ) ಉದ್ಧರಣ (ಡಿ) ಆವರಣ<br>***ಉತ್ತರ :*** (ಸಿ) ಉದ್ಧರಣ | |
| 2. | 'ಅವರೇ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ<br>(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಕ್ರಿಯಾರ್ಥಕಾವ್ಯಯ<br>(ಸಿ) ಸಂಬಂಧಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ<br>***ಉತ್ತರ :*** (ಡಿ) ಅವಧಾರಣಾರ್ಥಕಾವ್ಯಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ‘ಶರಚ್ಚಂದ್ರ’ ಪದವು ಈ ಸಂಧಿಯದ್ದಾಗಿದೆ<br>(ಎ) ಶ್ಚುತ್ವ (ಬಿ) ಜಶ್ತ್ವ<br>(ಸಿ) ವೃದ್ಧಿ (ಡಿ) ಯಣ್<br>***ಉತ್ತರ :*** (ಎ) ಶ್ಚುತ್ವ | |
| 4. | ತೃತೀಯಾ ವಿಭಕ್ತಿಯ ಕಾರಕಾರ್ಥ<br>(ಎ) ಕರ್ತ್ರಾರ್ಥ (ಬಿ) ಕರಣಾರ್ಥ<br>(ಸಿ) ಅಪಾದಾನ (ಡಿ) ಸಂಪ್ರದಾನ<br>***ಉತ್ತರ :*** (ಬಿ) ಕರಣಾರ್ಥ | |
| 5. | ಸಂಭಾವನಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾಗಿರುವ ಪದ<br>(ಎ) ಮಾಡೋಣ (ಬಿ) ಮಾಡನು<br>(ಸಿ) ಮಾಡಿಯಾನು (ಡಿ) ಮಾಡಲಿ<br>***ಉತ್ತರ :*** (ಸಿ) ಮಾಡಿಯಾನು | |
| 6. | ‘ರಸ್ತೆ’ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.<br>(ಎ) ಹಿಂದೂಸ್ಥಾನಿ (ಬಿ) ಪೋರ್ಚುಗೀಸ್<br>(ಸಿ) ಅರಬ್ಬೀ (ಡಿ) ಫಾರ್ಸಿ<br>***ಉತ್ತರ :*** (ಡಿ) ಫಾರ್ಸಿ | |
| II. | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 7. | ಮುರಾರಿ : ಕೃಷ್ಣ :: ರಾಜೀವ ಸಖ : ......................... .<br>***ಉತ್ತರ :*** ಸೂರ್ಯ | |
| 8. | ವಂಧ್ಯಾ : ಬಂಜೆ :: ದೃಷ್ಟಿ : ......................... .<br>***ಉತ್ತರ :*** ದಿಟ್ಟಿ | |
| 9. | ಇಮ್ಮಾವು : ಕರ್ಮಧಾರಯ ಸಮಾಸ :: ಹಿಂದಲೆ : ......................... .<br>***ಉತ್ತರ :*** ಅಂಶಿ ಸಮಾಸ | |
| 10. | ಕನ್ನಡಿಗ : ತದ್ಧಿತಾಂತನಾಮ :: ಪೆರ್ಮೆ : ......................... .<br>***ಉತ್ತರ :*** ತದ್ಧಿತಾಂತ ಭಾವನಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** <br> **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | $7 \times 1 = 7$ |
| 11. | ಸೇನೆಯಲ್ಲಿದ್ದ ವೈದ್ಯನ ಹೆಸರೇನು ? <br> ***ಉತ್ತರ :*** <br> ಸೇನೆಯಲ್ಲಿದ್ದ ವೈದ್ಯನ ಹೆಸರು ರಾಹಿಲ. | |
| 12. | ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ಯಾರು ? <br> ***ಉತ್ತರ :*** <br> ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ಶಬರಿ. | |
| 13. | ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ? <br> ***ಉತ್ತರ :*** <br> ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು. | |
| 14. | ಅಶೋಕ ಪೈ ಅವರ ವೃತ್ತಿ ಯಾವುದು ? <br> ***ಉತ್ತರ :*** <br> ಅಶೋಕ ಪೈ ಅವರು ವೃತ್ತಿಯಲ್ಲಿ ಮನೋವೈದ್ಯರು. | |
| 15. | ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ? <br> ***ಉತ್ತರ :*** <br> ಹಕ್ಕಿಯ ಗರಿಯಲ್ಲಿ ಬಿಳಿ ಮತ್ತು ಹೊಳೆಯುವ ಬಣ್ಣಗಳಿವೆ. | |
| 16. | ದುರ್ಯೋಧನ ತಾನು ಹೋರಾಡುತ್ತಿರುವುದು ಏಕೆ ಎಂದು ಭೀಷ್ಮನಿಗೆ ಹೇಳುತ್ತಾನೆ ? <br> ***ಉತ್ತರ :*** <br> ದುರ್ಯೋಧನ ತಾನು ಹೋರಾಡುತ್ತಿರುವುದು ಛಲಕ್ಕಾಗಿ ಎಂದು ಭೀಷ್ಮನಿಗೆ ಹೇಳುತ್ತಾನೆ. | |
| 17. | ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ದೊರೆತ ಫಲವೇನು ? <br> ***ಉತ್ತರ :*** <br> ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ದೊರೆತ ಫಲ ಮರಣದಂಡನೆ. | |
| IV. | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $10 \times 2 = 20$ |
| 18. | ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು ? <br> ***ಉತ್ತರ :*** <br> ‘ಬಾಗಿಲು ತೆಗೆಯಿರಿ’ ಎಂಬ ಗರ್ಜನೆಯ ಧ್ವನಿ ಕೇಳಿದ ಮುದುಕಿ ನಿಶ್ಶಬ್ದವಾಗಿ ರಾಹಿಲನನ್ನು ಸೊಸೆ ಮಲಗಿದ ಕೋಣೆಗೆ ಕಳಿಸಿ ಮಂಚದಡಿಯನ್ನು ತೋರಿಸಿದಳು. ಬಾಗಿಲು ತೆರೆದಾಗ ಒಳನುಗ್ಗಿದ ಸೈನಿಕರು ‘ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ’ ಎಂದು ಹುಡುಕಲು ಮುಂದಾದಾಗ ‘ನನ್ನ ಮೊಮ್ಮಗುವಿನ ಹೆಣವಿದೆ, ಅದನ್ನೂ ನೋಡಿ, ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ ? ಅದನ್ನಾದರೂ ಹೇಳಿರಿ. ಈ ಯುದ್ಧ ನನ್ನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೊಮ್ಮಗುವನ್ನೂ ಉಳಿಸಲಿಲ್ಲ ಎಂದು ನಿರ್ಜೀವವಾದ ಮಗುವಿನ ಬಳಿ ಕುಳಿತು ಎದೆ ಬಡಿದುಕೊಂಡು ಅಳುತ್ತಾಳೆ. ಬಂದವರು ಮಗುವಿನ ಶವವನ್ನು ನೋಡಿದರು. ಕೋಣೆಯಿಂದ ಬರುತ್ತಿದ್ದ ಹಸಿ ನೆತ್ತರ ವಾಸನೆ ಮೂಗಿಗೆ ಬಡಿಯಿತು. ಬಂದ ಎಲ್ಲಾ ಸೈನಿಕರು ನಿಶ್ಯಬ್ದವಾಗಿ ಹಿಂದಿರುಗಿದರು. ಹೀಗೆ ಮುದುಕಿ ರಾಹಿಲನನ್ನು ಸೈನಿಕರಿಂದ ರಕ್ಷಿಸಿದಳು. | |
| 19. | ರಾಮಲಕ್ಷ್ಮಣರನ್ನು ಶಬರಿ ಹೇಗೆ ಸತ್ಕರಿಸಿದಳು ?<br>***ಉತ್ತರ :***<br>ರಾಮ ಬಂದು ನಿಂತಿರುವುದನ್ನು ಕಂಡು ಆಶ್ಚರ್ಯಗೊಳ್ಳುತ್ತಾಳೆ. ಸಮೀಪಕ್ಕೆ ಹೋಗಿ ಆತನ ಮೈಮುಟ್ಟಿ ಪಾದಗಳಿಗೆ ನಮಸ್ಕರಿಸಿ ಕೈಗಳನ್ನು ಕಣ್ಣಿಗೊತ್ತಿಕೊಂಡು ಆನಂದಭಾಷ್ಪ ಸುರಿಸುತ್ತಾಳೆ. ಅಯ್ಯೋ, ಇಂದು ಏನೂ ಸಿದ್ಧತೆ ಮಾಡಿಕೊಂಡಿಲ್ಲ ನಿನ್ನೆಯಷ್ಟು ಚೆನ್ನವಿಲ್ಲ ಎನ್ನುತ್ತಾ ವನಮಾಲೆಯನ್ನು ಕೊರಳಿಗೆ ಹಾಕಿ ಹಿಗ್ಗುತ್ತಾಳೆ. ಇದರಷ್ಟು ರುಚಿಕರವಾದ ಹಣ್ಣೇ ಜಗತ್ತಿನಲ್ಲಿ ಇಲ್ಲ ಎಂದು ತಾನೇ ಅವರ ಕೈಯಲ್ಲಿಟ್ಟು ರಾಮಲಕ್ಷ್ಮಣರನ್ನು ಸತ್ಕರಿಸುತ್ತಾಳೆ. | |
| 20. | ಮಂಚಮ್ಮದೇವಿ ಮನೆಮಂಚಮ್ಮದೇವಿಯಾಗಿ ರೂಪುಗೊಂಡ ಬಗೆ ಹೇಗೆ ? ತಿಳಿಸಿ.<br>***ಉತ್ತರ :***<br>ಒಮ್ಮೆ ಗ್ರಾಮದ ಜನರೆಲ್ಲಾ ಸೇರಿ ಮಂಚಮ್ಮದೇವಿಗೆ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ. ಚಾವಣಿಯ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೆ ದೇವಿ ಆವಾಹಿಸಿಕೊಂಡು ಜನರನ್ನು ಕುರಿತು 'ಏನ್ರಯ್ಯಾ, ಏನು ಮಾಡ್ತಾ ಇದ್ದೀರಿ ?' ಎಂದು ಪ್ರಶ್ನಿಸುತ್ತಾಳೆ. ನಿನಗೆ ಗುಡಿ ಕಟ್ಟುತ್ತಿದ್ದೇವೆ ಎಂದು ಜನರು ಉತ್ತರಿಸಿದಾಗ 'ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ ? ಎಂದು ದೇವಿ ಅಬ್ಬರಿಸಿದಾಗ ಒಬ್ಬ 'ನನಗಿಲ್ಲ ತಾಯಿ' ಎನ್ನುತ್ತಾನೆ. ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ ಎಂದ ಮಂಚಮ್ಮದೇವಿ ಅಂದಿನಿಂದ ಮನೆಮಂಚಮ್ಮ ದೇವಿಯಾಗಿ ರೂಪುಗೊಂಡು ಇಂದಿಗೂ ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗುತ್ತಿದ್ದಾಳೆ. | |
| 21. | ಹುಲಿ ನಿರಾಶೆಯಿಂದ ಕೋಪಗೊಂಡು ಘರ್ಜಿಸಿ ಏಕೆ ಪಲಾಯನ ಮಾಡಿತು ?<br>***ಉತ್ತರ :***<br>ಹಸಿದ ಹುಲಿ ದುಂಡು ದುಂಡಾದ ಶಾನುಭೋಗರ ಶರೀರವನ್ನು ನೋಡಿ ತಿನ್ನಲು ಹವಣಿಸಿತ್ತು. ಹುಲಿ ಮತ್ತು ಶಾನುಭೋಗರ ದೊಂಬರಾಟದಲ್ಲಿ ಶಾನುಭೋಗರು ಮೂರ್ಛೆ ಹೋದಾಗ ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿಯಿದೆ ಎನ್ನುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳಗೆ ಎದೆ ನಡುಗುವಂತೆ ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದ ಕೋಪಗೊಂಡು ಘರ್ಜಿಸಿ ಅಲ್ಲಿಂದ ಪಲಾಯನ ಮಾಡಿತು. | |
| 22. | 'ಮೇದಿನಿ ಪತಿ ನೀನು' ಎಂದು ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಕೃಷ್ಣ ಸಂಧಾನವು ದುರ್ಯೋಧನನ ಹಠದಿಂದ ವಿಫಲವಾಗುತ್ತದೆ. ಕರ್ಣನ ಬಳಿಗೆ ಬಂದ ಧರ್ಮ ಪಕ್ಷಪಾತಿಯಾದ ಕೃಷ್ಣನು ಕರ್ಣನನ್ನು ತನ್ನ ರಥದ ಪೀಠದಲ್ಲಿ ಕುಳ್ಳಿರಿಸಿಕೊಂಡು "ನಿಮ್ಮಲ್ಲಿ ಯಾದವರು ಮತ್ತು ಕೌರವರಲ್ಲಿ ಯಾವುದೇ ಭೇದವಿಲ್ಲ. ಸರಿಯಾಗಿ ವಿಚಾರಿಸಿ ನೋಡಿದರೆ ಈ ಎರಡು ವಂಶಗಳಲ್ಲಿ ಮೊದಲು ಮತ್ತು ಎರಡು ಎಂಬುದಿಲ್ಲ. ಈ ಭೂಮಿಗೆ ನೀನೇ ನಿಜವಾದ ಒಡೆಯನಾಗಬೇಕು. ಇದು ನಿನ್ನ ಅರಿವಿಗೆ ಬಂದಿಲ್ಲವಷ್ಟೆ" ಎಂದು ಕೃಷ್ಣನು ಕರ್ಣನ ಮನದಲ್ಲಿ ಭಯವನ್ನು ಬಿತ್ತಿದನು. | |
| 23. | ಅಂತಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು ? | |
| | *ಉತ್ತರ :* | |
| | ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ಭೀಷ್ಮನು ದುರ್ಯೋಧನನಿಗೆ ನೀಡುತ್ತಾನೆ. ಆದರೆ ದುರ್ಯೋಧನ ಇದಕ್ಕೆ ಒಪ್ಪದೆ 'ನನ್ನ ಪ್ರಿಯ ಗೆಳೆಯ ಕರ್ಣನನ್ನು ಕೊಂದ ಅರ್ಜುನ, ನನ್ನ ಪ್ರಿಯ ತಮ್ಮ ದುಶ್ಯಾಸನನ್ನು ಕೊಂದ ಭೀಮ, ಇವರಿಬ್ಬರೂ ಬದುಕಿರುವವರೆಗೆ ಸಂಧಿ ಸಾಧ್ಯವಿಲ್ಲ. ಮೊದಲು ಪಾರ್ಥ–ಭೀಮರನ್ನು ಕೊಂದು, ಬಳಿಕ ನನ್ನ ದುಃಖ ಕಡಿಮೆಯಾದ ಮೇಲೆ ನಿನ್ನ ಸಲಹೆಯಂತೆ ಅಂತಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ. | |
| 24. | 'ವೈವಿಧ್ಯವೇ ಜೀವನದ ರಹಸ್ಯ' ಎಂಬುದನ್ನು ವಿವೇಕಾನಂದರು ಹೇಗೆ ತಿಳಿಸಿದ್ದಾರೆ ? | |
| | *ಉತ್ತರ :* | |
| | 1893 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ, "ಸ್ವಮತಾಭಿಮಾನ, ಅನ್ಯಮತ ದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು. ಪ್ರತಿಯೊಬ್ಬರೂ ಒಂದೇ ಮಾರ್ಗವನ್ನು ಅನುಸರಿಸುವ ದುರ್ದಿನ ಪ್ರಪಂಚಕ್ಕೆ ಬಾರದಿರಲಿ. ವೈವಿಧ್ಯವೇ ಜೀವನದ ರಹಸ್ಯ. ನಾವು ಎಲ್ಲಾ ಧರ್ಮಗಳಿಗೂ ಗೌರವವನ್ನು ತೋರಬೇಕು ಎಂದು ವಿವೇಕಾನಂದರು ತಿಳಿಸಿದ್ದಾರೆ. | |
| 25. | 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ? | |
| | *ಉತ್ತರ :* | |
| | ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ಸ್ವಚ್ಛಂದವಾಗಿ ರೆಕ್ಕೆ ಬಿಚ್ಚಿ ಹಾರಾಡುತ್ತಿವೆ. ಕೋಗಿಲೆಗಳು ಯಾರ ಹಂಗಿಲ್ಲದೆ, ಯಾವುದೇ ಅಡೆತಡೆಯಿಲ್ಲದೆ ಮನದುಂಬಿ ಹಾಡುತ್ತಿವೆ. ಕಡಲುಗಳು ಉಕ್ಕಿ ಅಲೆಗಳು ಭೂಮಿಗೆ ಬಂದು ಅಪ್ಪಳಿಸುತ್ತ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಂಭ್ರಮಿಸುತ್ತಿವೆ ಎಂದು 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ. | |
| 26. | ಮೃಗಗಳು ಹಾಗೂ ಮನುಷ್ಯರಿಗಿರುವ ವ್ಯತ್ಯಾಸವನ್ನು ಸುಂದರಿ ಹೇಗೆ ವಿವರಿಸುತ್ತಾಳೆ ? | |
| | ***ಉತ್ತರ :*** | |
| | ಭಯದಿಂದ ಅರಮನೆ ಪ್ರವೇಶಿಸಿದ ಸುಂದರಿಯನ್ನು ಭೀಕರವಾದ ಮೃಗ "ನೀನು ಸಂತೋಷದಿಂದ ಬಂದೆಯಾ ? ನಾನು ನಿನಗೆ ಇಷ್ಟವಾಗಿರುವೆನಾ ?" ಎಂದು ಕೇಳಿದಾಗ ಸುಂದರಿ ಭಯದಿಂದ "ನಾನು ಸುಳ್ಳು ಹೇಳಲಾರೆ, ನೀನು ಕುರೂಪಿಯಾದರೂ ತುಂಬಾ ಒಳ್ಳೆಯವನಂತೆ ಇದ್ದೀಯಾ" ಎನ್ನುತ್ತಾಳೆ. ಆಗ "ನನ್ನ ಹೃದಯ ಒಳ್ಳೆಯದಿದ್ದರೂ ನಾನು ಮೃಗ" ಎಂದು ಮೃಗ ಹೇಳಿದಾಗ "ಮೃಗ ಒಳ್ಳೆಯ ಹೃದಯ ಹೊಂದಿದ್ದರೂ ಮೃಗದ ಆಕಾರ ಹೊಂದಿರುವುದು ಸಹಜ. ಆದರೆ ಜಗತ್ತಿನಲ್ಲಿ ಅನೇಕ ಮನುಷ್ಯರು ಸುಂದರ ಆಕಾರ ಪಡೆದು ಮೃಗದ ಹೃದಯ ಹೊಂದಿರುತ್ತಾರೆ" ಎಂದು ಸುಂದರಿ ವಿವರಿಸುತ್ತಾಳೆ. | |
| 27. | ಬೀಸುಕಲ್ಲಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ? | |
| | ***ಉತ್ತರ :*** | |
| | ಸಾಮಾನ್ಯವಾಗಿ ಬಾಯಿಯಲ್ಲಿ ತಿಂದರೆ ಬಾಯಿಯಲ್ಲಿಯೇ ಕಕ್ಕುತ್ತಾರೆ. ಆದರೆ ಇದು ಬಾಯಿಯಲ್ಲಿ ತಿಂದು ಬಗಲಲ್ಲಿ ಕಕ್ಕುತ್ತದೆ. ಈ ಒಗಟನ್ನು ಅರ್ಥೈಸಿ ಹೇಳಬೇಕು. ಇಲ್ಲವಾದರೆ ಹಲ್ಲು ಮುರಿದು ಕೈಗೆ ಕೊಡುವೆನು ಎಂದು ಜನಪದರು ಬೀಸುಕಲ್ಲಿನ ವಿಶೇಷತೆಯನ್ನು ಒಗಟಿನಲ್ಲಿ ವ್ಯಕ್ತಪಡಿಸಿದ್ದಾರೆ. | |
| V. | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು/ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಎ.ಎನ್. ಮೂರ್ತಿರಾವ್ : | |
| | ***ಉತ್ತರ :*** | |
| | ಆಧುನಿಕ ಕನ್ನಡದ ಸಾಹಿತ್ಯದ ಪ್ರಮುಖ ಗದ್ಯಬರಹಗಾರರಲ್ಲಿ ಒಬ್ಬರಾದ ಎ.ಎನ್. ಮೂರ್ತಿರಾವ್‌ರವರು ಪ್ರಬಂಧಕಾರರಾಗಿಯೇ ಮಾನ್ಯರಾಗಿದ್ದಾರೆ. ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾವ್. ಎ.ಎನ್. ಮೂರ್ತಿರಾವ್‌ರವರು ೧೯೦೦ ರಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಇವರು 'ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ, ಚಿತ್ರಗಳು–ಪತ್ರಗಳು, ದೇವರು' ಎಂಬ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. 'ಚಿತ್ರಗಳು–ಪತ್ರಗಳು' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ದೇವರು' ಎಂಬ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ, ಸೇವೆ ಸಲ್ಲಿಸಿದ್ದಾರೆ. ೧೯೮೪ ರಲ್ಲಿ ಕೈವಾರದಲ್ಲಿ ಸಮಾವೇಶಗೊಂಡ ೫೬ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |
| 29. | ಕುವೆಂಪು :<br>***ಉತ್ತರ :***<br>ಆಧುನಿಕ ಕನ್ನಡ ಸಾಹಿತ್ಯದ ಕವಿಗಳಲ್ಲಿ ಅಗ್ರಗಣ್ಯರಾದ ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರು ಮಲೆನಾಡಿನ ಮಡಿಲಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ ೧೯೦೪ ರಲ್ಲಿ ಜನಿಸಿದರು. ಇವರು ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ. 'ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ' ಎಂಬ ಕವನ ಸಂಕಲನಗಳು, 'ನನ್ನ ದೇವರು ಮತ್ತು ಇತರ ಕಥೆಗಳು, ಸಂನ್ಯಾಸಿ ಮತ್ತು ಇತರ ಕಥೆಗಳು' ಎಂಬ ಕಥಾಸಂಕಲನಗಳು, 'ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು' ಎಂಬ ಕಾದಂಬರಿಗಳು, 'ತಪೋನಂದನ, ರಸೋವೈಸಃ' ಎಂಬ ವಿಮರ್ಶಾ ಸಂಕಲನಗಳು, 'ಅಮಲನ ಕಥೆ, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿಯ ಕಿಂದರಿಜೋಗಿ' ಎಂಬ ಮಕ್ಕಳ ಪುಸ್ತಕಗಳು, 'ಜಲಗಾರ, ಯಮನ ಸೋಲು, ಬೆರಳ್ಗೆ ಕೊರಳ್' ಎಂಬ ನಾಟಕಗಳು, 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥನ, 'ಶ್ರೀರಾಮಾಯಣ ದರ್ಶನಂ' ಎಂಬ ಮಹಾಕಾವ್ಯವೂ ಸೇರಿದಂತೆ ಸುಮಾರು ಎಪ್ಪತ್ತು ಕೃತಿಗಳನ್ನು ರಚಿಸಿದ್ದಾರೆ. ಇವರು ತಮ್ಮ ಸಾಹಿತ್ಯ ಕೃಷಿಗಾಗಿ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ಭಾರತೀಯ ಜ್ಞಾನಪೀಠ ಪ್ರಶಸ್ತಿ, 'ರಾಷ್ಟ್ರಕವಿ', ಪಂಪ ಪ್ರಶಸ್ತಿ, ಪದ್ಮವಿಭೂಷಣ, ಕರ್ನಾಟಕ ರತ್ನ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇದರೊಂದಿಗೆ ಮೈಸೂರು, ಬೆಂಗಳೂರು, ಕರ್ನಾಟಕ, ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿವೆ. | |
| VI. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

30. ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್.

| ಭ | ರ | ನ | ಭ | ಭ | ರ | ಲ + ಗು |
|---|---|---|---|---|---|---|
| — U U | — U — | U U U | — U U | — U U | — U — | U — |
| ಕೋಗಿಲೆ | ಯಾಗಿ ಪು | ಟ್ಟುವುದು | ನಂದನ | ದೊಳ್ ವನ | ವಾಸಿ ದೇ | ಶದೊಳ್ |

ಇದು ಅಕ್ಷರಗಣ ಛಂದಸ್ಸಿನ ‘ಉತ್ಪಲಮಾಲಾವೃತ್ತ’ದಲ್ಲಿ ರಚಿತವಾಗಿದೆ.

VII. **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** $1 \times 3 = 3$

| | | |
|---|---|---|
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

31. ರಾಮಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು.

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ* : ರಾಮಲಕ್ಷ್ಮಣರು

*ಉಪಮಾನ* : ಅಶ್ವಿನಿದೇವತೆಗಳು

*ಉಪಮಾವಾಚಕ ಪದ :* ಅಂತೆ

*ಸಮಾನಧರ್ಮ :* ಶೋಭಿಸು

ಇಲ್ಲಿ ಉಪಮೇಯವಾದ ರಾಮಲಕ್ಷ್ಮಣರನ್ನು ಉಪಮಾನವಾದ ಅಶ್ವಿನಿದೇವತೆಗಳಿಗೆ ಹೋಲಿಸಲಾಗಿದೆ. ‘ಅಂತೆ’ ಎಂಬ ಉಪಮಾವಾಚಕ ಪದವಿದ್ದು, ‘ಶೋಭಿಸು’ ಎಂಬ ಸಮಾನಧರ್ಮ ಇರುವುದರಿಂದ ಪೂರ್ಣೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ.

VIII. **ಗಾದೆಯನ್ನು ವಿಸ್ತರಿಸಿ ಬರೆಯುವುದು :** $1 \times 3 = 3$

| | | |
|---|---|---|
| | ಗಾದೆಯ ಮಹತ್ವದ ವಿವರಣೆ | 1 ಅಂಕ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಬೆಳೆಯುವ ಸಿರಿ ಮೊಳಕೆಯಲ್ಲಿ<br>***ಅಥವಾ***<br>ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ | |
| IX. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | “ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ”<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ ‘ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು’ ಎಂಬ ಕೃತಿಯಿಂದ ಆಯ್ದ ‘ಭಾಗ್ಯಶಿಲ್ಪಿಗಳು’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದಿಂದ ಆಡಳಿತದಲ್ಲಿ ಹೊಸ ಬದಲಾವಣೆಗಳನ್ನು ತಂದರು. ಆಡಳಿತ ವಿಕೇಂದ್ರಿಕರಿಸಿದರು. ಅನೇಕ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳಾಗಿಸಿ, ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಅವುಗಳಲ್ಲಿ ದೇವದಾಸಿ ಪದ್ಧತಿ ನಿಷೇಧ, ಗೆಜ್ಜೆಪೂಜೆ ಪದ್ಧತಿ ನಿಷೇಧ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ಸ್ತ್ರೀಯರಿಗೆ ಮತದಾನದ ಹಕ್ಕು ಇತ್ಯಾದಿ ಕಾಯ್ದೆಗಳೊಂದಿಗೆ ಮೇಲಿನ ಕಾಯ್ದೆಯನ್ನು ಜಾರಿಗೆ ತಂದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಓದುಗರಿಗೆ ಹೇಳಿದ್ದಾರೆ.<br>***ಸ್ವಾರಸ್ಯ :*** ಸಾಮಾಜಿಕ ಕಳಕಳಿ, ಸಂಸ್ಥಾನದ ಸರ್ವತೋಮುಖ ಏಳಿಗೆ, ಅಭಿವೃದ್ಧಿಯ ದೂರದೃಷ್ಟಿ, ವ್ಯಕ್ತಿತ್ವ ವಿಕಸನ, ಸಾಮಾನ್ಯ ಜನರ ಕಲ್ಯಾಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದು ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ. | |
| 34. | “ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ”<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ದುಷ್ಟಬುದ್ಧಿ ಧರ್ಮಾಧಿಕರಣರ ಮುಂದೆ ಧರ್ಮಬುದ್ಧಿಯೇ ಹೊನ್ನನ್ನು ಕದ್ದಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿ ಎಂದು ನುಡಿದಾಗ, ಮರುದಿನ ಸಾಕ್ಷಿ ಕೇಳುವುದಾಗಿ ನುಡಿದು ಕಳಿಸಿದಾಗ ದುಷ್ಟಬುದ್ಧಿ ಮನೆಗೆ ಬಂದವನೇ ತನ್ನ ತಂದೆಯನ್ನು ಏಕಾಂತಕ್ಕೆ ಕರೆದೊಯ್ದು, ಆ ಮರದ ಪೊಟರೆಯಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನ್ನೆಲ್ಲವನ್ನು ಕದ್ದೊಯ್ದಿರುವನು ಎಂದು ಸಾಕ್ಷಿ ನುಡಿಯಬೇಕು ಎನ್ನುತ್ತಾನೆ. ಆಗ ದುಷ್ಟಬುದ್ಧಿಯ ತಂದೆ 'ಪರಧನ ಹರಣ, ಸ್ವಾಮಿದ್ರೋಹ, ವಿಶ್ವಾಸದ್ರೋಹ ನಮ್ಮನ್ನು ನಾಶಪಡಿಸುತ್ತವೆ ಎಂದು ತಿಳಿದಿದ್ದರೂ ನನ್ನನ್ನು ಸಾಕ್ಷಿ ಮಾಡಿ ನಾಶ ಮಾಡಲು ಬಗೆದಿರುವೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ದುಷ್ಟಬುದ್ಧಿಗೆ ಹೇಳುತ್ತಾನೆ. | |
| | ***ಸ್ವಾರಸ್ಯ :*** ಇದುವರೆಗೂ ಗೌರವದಿಂದ ಬದುಕಿದ್ದ ತಂದೆಯನ್ನು ಮಗ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು, ದುಷ್ಟನಾದ ಮಗನನ್ನು ತಿದ್ದಲು ಪ್ರಯತ್ನಿಸಿದರೂ ಮಗ ನಿರ್ಲಕ್ಷಿಸುವುದು, ಮಗನ ನಿರ್ಧಾರದಿಂದ ಇಡೀ ವಂಶವೇ ನಾಶವಾಗುತ್ತದೆ ಎಂಬ ತಂದೆಯ ಚಿಂತೆ ಮತ್ತು ಅಸಮಾಧಾನ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 35. | "ಅವಂತಿ ಸುಕುಮಾರನೆಂದು ಪೆಸರನಿಟ್ಟಂ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯ ರಚಿಸಿರುವ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಸುಕುಮಾರ ಸ್ವಾಮಿಯ ಕತೆ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಯಶೋಭದ್ರೆಯ ಮನೆಯ ಐಶ್ವರ್ಯವನ್ನು ನೋಡಲೆಂದು ಬಂದ ವೃಷಭಾಂಕ ರಾಜನು, ಸುಕುಮಾರಸ್ವಾಮಿಯ ವರ್ತನೆಯನ್ನು ಗಮನಿಸಿದ ರಾಜ ಆಶ್ಚರ್ಯಗೊಂಡು ಪ್ರಶ್ನಿಸಲಾಗಿ, ಯಶೋಭದ್ರೆ 'ಇದು ವ್ಯಾಧಿಯಲ್ಲ ಬಿಳಿಸಾಸಿವೆ ಒತ್ತಿದಂತಾಗಿ ಸೊಂಟ ಅಲುಗಾಡಿಸಿದನು, ಸದಾ ಮಾಣಿಕ್ಯದ ಬೆಳಕಿನಲ್ಲಿರುತ್ತಿದ್ದವನು ದೀಪದ ಬೆಳಕು ನೋಡಿ ಕಣ್ಣೀರು ಸುರಿಯಿತು, ಕಮಲ–ನೈದಿಲೆಯ ಪರಿಮಳಯುಕ್ತವಾದ ಅಕ್ಕಿಯಿಂದ ಮಾಡಿದ ಅನ್ನವನ್ನೇ ಉಣ್ಣುತ್ತಿದ್ದನು. ಇಂದು ಬೇರೆ ಅಕ್ಕಿಯನ್ನು ಬೆರೆಸಿ ಅನ್ನ ಮಾಡಿದ್ದರಿಂದ ಪರಿಮಳಯುಕ್ತ ಅನ್ನವನ್ನು ನುಂಗಿ, ಬೇರೆ ಅನ್ನವನ್ನು ಉಗುಳುತ್ತಿದ್ದನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎಂದಾಗ ರಾಜನು ಆಶ್ಚರ್ಯಚಕಿತನಾಗಿ ಈತನ ಕ್ಷಣಮಾತ್ರದ ಭೋಗಕ್ಕೆ ನಮ್ಮ ಎಲ್ಲಾ ಕಾಲದ ಅರಸುತನ ಸಮನಲ್ಲ ಎಂದು ಮೆಚ್ಚಿ ಮೇಲಿನಂತೆ ಹೆಸರಿಡುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಭೋಗೋಪಭೋಗಗಳಿಗೆ ಹೆಸರಾದ ರಾಜರು ಅನುಭವಿಸದ ಸುಖಭೋಗಗಳಿಲ್ಲ. ಆದರೆ ಒಬ್ಬ ವರ್ತಕನ ಮಗ ಅನುಭವಿಸುವ ಸುಖಭೋಗದ ಮುಂದೆ ನಮ್ಮ ರಾಜಭೋಗ ಗೌಣ ಎಂದು ಭಾವಿಸಿ, ನಿಜವಾದ ಸುಖಿ ಎಂದರೆ ಸುಕುಮಾರಸ್ವಾಮಿಯೇ ಎಂದು ಮೆಚ್ಚಿ ಬಿರುದನ್ನು ನೀಡಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 36. | "ವಸಂತವಾಗುತ ಮುಟ್ಟೋಣ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸುತ್ತ ವಾಕ್ಯವನ್ನು ಜಿ.ಎಸ್. ಶಿವರುದ್ರಪ್ಪನವರು ರಚಿಸಿರುವ 'ಎದೆ ತುಂಬಿ ಹಾಡಿದೆನು' ಎಂಬ ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಕೈಗಾರಿಕೀಕರಣ, ಯಾಂತ್ರೀಕರಣಗಳಿಂದ ಪರಿಸಂದಲ್ಲಿರುವ ಅನೇಕ ನದಿ ಜಲಗಳು ಕಲುಷಿತವಾಗಿವೆ. ಕಾಡುಗಳು ಬರಡಾಗಿವೆ. ಹಾಗೆಯೇ ಮನುಷ್ಯರಲ್ಲಿಯೂ ಪ್ರೀತಿ ವಿಶ್ವಾಸದಂತಹ ಭಾವನೆಗಳು ಬತ್ತಿಹೋಗಿವೆ. ಬರಡಾಗಿರುವ ಕಾಡುಗಳು ವಸಂತಕಾಲದಲ್ಲಿ ಚಿಗುರೊಡೆದು ಹಸಿರಾಗುವಂತೆ ಮನುಷ್ಯರಲ್ಲಿಯೂ ಧನಾತ್ಮಕ ಭಾವನೆ ಮೂಡಿಸಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಸಾಲು ಬಂದಿದೆ. | |
| | ***ಸ್ವಾರಸ್ಯ :*** ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ 'ಅಸಾಧ್ಯವಾದುದು ಯಾವುದೂ ಇಲ್ಲ', ದೃಢ ಸಂಕಲ್ಪದಿಂದ ಏನನ್ನೂ ಬೇಕಾದರೂ ಸಾಧಿಸಬಹುದು. ಐಕ್ಯದಿಂದ ಪ್ರಯತ್ನಶೀಲರಾದಾಗ ಬಲವರ್ಧಿಸುತ್ತದೆ ಎಂಬುದು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| 37. | "ತೇಲಿಸಿ ಮುಳುಗಿಸಿ ಖಂಡ–ಖಂಡಗಳ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದ.ರಾ. ಬೇಂದ್ರೆಯವರು ರಚಿಸಿರುವ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಕಾಲ ಉರುಳಿದಂತೆ ಪ್ರತಿಯೊಂದು ಘಟನೆಗಳು ಇತಿಹಾಸವಾಗುತ್ತ ಹೋಗುತ್ತದೆ ಎಂಬುದನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹೇಳಲಾಗಿದೆ. ಕಾಲ ಎಂಬ ಪಕ್ಷಿ ತನ್ನ ಪಯಣದಲ್ಲಿ ಸಣ್ಣಪುಟ್ಟ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾಜಮನೆತನ, ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಸಿ ಅದರ ಫಸಲನ್ನು ಕೊಯ್ಲು ಮಾಡಿದೆ. ಸಣ್ಣ ದೊಡ್ಡ ಕೋಟೆ ಕೊತ್ತಲಗಳನ್ನು ನಾಶಪಡಿಸಿ, ಖಂಡ–ಖಂಡಗಳನ್ನು ತೇಲಿಸಿ ಮುಳುಗಿಸಿದೆ. ತಾನೇ ಸಾರ್ವಭೌಮ ಎಂದು ಮೆರೆಯುತ್ತಿದ್ದವರ ನೆತ್ತಿಯನ್ನು ಕುಕ್ಕಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ನಿಸರ್ಗ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಎಷ್ಟೇ ಪ್ರಭಾವಶಾಲಿಯಾದರೂ ಕಾಲಚಕ್ರದ ಮುಂದೆ ಎಲ್ಲರೂ ತಲೆಬಾಗಲೇಬೇಕು. ಎಷ್ಟೇ ದೊಡ್ಡ ವ್ಯಕ್ತಿಯಾಗಲಿ, ಸಾಮ್ರಾಜ್ಯವಾಗಲೀ ಜಗತ್ತಿನಲ್ಲಿ ಯಾರೂ, ಯಾವುದೂ ಶಾಶ್ವತವಲ್ಲ ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 38. | "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಕುಮಾರವ್ಯಾಸ ರಚಿಸಿರುವ 'ಕರ್ಣಾಟ ಭಾರತ ಕಥಾಮಂಜರಿ' ಕಾವ್ಯದ ಉದ್ಯೋಗಪರ್ವದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ***ಸಂದರ್ಭ :*** ಸಂಧಿ ವಿಫಲವಾಗಿ ಯುದ್ಧ ಎಂದು ತೀರ್ಮಾನವಾದಾಗ ಕೃಷ್ಣನು ದುರ್ಯೋಧನನ ಶಕ್ತಿಯಾಗಿದ್ದ ಕರ್ಣನ ಬಲವನ್ನು ಕುಗ್ಗಿಸಲು ಕರ್ಣನನ್ನು ತನ್ನೊಡನೆ ಕರೆತಂದು ಜನ್ಮರಹಸ್ಯವನ್ನು ತಿಳಿಸುತ್ತ, ಕುಂತಿ ಪಡೆದ ಮಕ್ಕಳಲ್ಲಿ ನೀನೇ ಮೊದಲಿಗ, ನಂತರ ಯುಧಿಷ್ಟಿರ, ಭೀಮ, ಅರ್ಜುನರು ಜನಿಸುತ್ತಾರೆ ಎಂದು ಹೇಳುವಾಗ ನಕುಲ ಸಹದೇವರು ಮಾದ್ರಿಯಲ್ಲಿ ಜನಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಕೃಷ್ಣನ ಭೇದ ತಂತ್ರ, ಶತ್ರುವಿನೊಂದಿಗೆ ಸಮರಕ್ಕಿಳಿದು ಹೋರಾಡುವ ಮುನ್ನ ಶತ್ರುಬಲವನ್ನು ಶಮನಗೊಳಿಸುವ ರಾಜತಂತ್ರ, ಪಾಂಡವರಿಗೆ ಅಪಾಯವಾಗದಂತೆ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂಬ ನಿರ್ಧಾರ, ಜನ್ಮರಹಸ್ಯ ತಿಳಿಸಿ ಕರ್ಣನನ್ನು ಭಾವನಾತ್ಮಕವಾಗಿ ಕುಗ್ಗಿಸುವ ಪ್ರಯತ್ನ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 39. | ಕೊಡಲಿ ಕೋರೆ ............................................ <br> ........................................................................ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ................................................................<br>.......................................... ಹೇಳಲಿ ನಾನೆಷ್ಟಾ.<br>**ಅಥವಾ**<br>ಸಿಕ್ಕದ್ದು ತಗೊಂಡು ..........................................<br>................................................................<br>................................................................<br>.......................................... ಹಾಡಿದೆನಣ್ಣಾ ಜನಕಾ.<br>***ಉತ್ತರ :***<br>ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ<br>ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ<br>ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ<br>ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ<br>**ಅಥವಾ**<br>ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ<br>ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು<br>ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು<br>ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ | |
| XI. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ<br>ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್<br>ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು<br>ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ<br>ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ<br>ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.<br>***ಉತ್ತರ :***<br>ಶ್ರೀರಾಮನ ಅಶ್ವಮೇಧಯಾಗದ ಕುದುರೆ ದೇಶ–ದೇಶಗಳನ್ನು ಸುತ್ತಿ ವಾಲ್ಮೀಕಿಯ ಆಶ್ರಮದ ಕಡೆಗೆ ಬರುತ್ತದೆ. ಇದನ್ನು ಗಮನಿಸಿದ ಲವನು ಕುದುರೆಯ ಬಳಿಗೆ ಹೋದಾಗ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅದರ ಹಣೆಯಲ್ಲಿ ಬರೆದ ಲೇಖನವನ್ನು ಓದಿ, ಆತನ ಗರ್ವವನ್ನು ಬಿಡಿಸಲೇಬೇಕೆಂದು ತನ್ನ ಹೆಗಲ ಮೇಲಿದ್ದ ಉತ್ತರೀಯವನ್ನು ಹುರಿ ಮಾಡಿ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟುತ್ತಾನೆ. ಇದನ್ನು ಕಂಡ ಋಷಿಕುಮಾರರು ನಡುಗಿ 'ಬೇಡಬೇಡ ಈ ಕುದುರೆಯನ್ನು ಕಟ್ಟಬೇಡ ಇದು ಅರಸರ ಕುದುರೆ, ಅವರಿಗೆ ಗೊತ್ತಾದರೆ ನಮ್ಮನ್ನು ಹೊಡೆಯುವರು' ಎಂದು ಹೆದರಿದರೆ, ಲವನು ನಗುತ್ತ "ಬ್ರಾಹ್ಮಣರ ಮಕ್ಕಳು ಹೆದರಿದರೆ, ಜಾನಕಿಯ ಮಗನಾದ ನಾನು ಹೆದರುವುದಿಲ್ಲ. ನಿಮಗೆ ಭಯವಾದರೆ ಇಲ್ಲಿಂದ ಹೊರಟುಹೋಗಿ" ಎಂದು ಹೇಳುತ್ತ ತನ್ನಲ್ಲಿದ್ದ ಬಿಲ್ಲನ್ನು ಹೆದೆಯೇರಿಸಿ ಯುದ್ಧಕ್ಕೆ ಸನ್ನದ್ಧನಾಗಿ ನಿಲ್ಲುತ್ತಾನೆ.<br><br>ಲವಕುಶರು ರಾಜನ ಮಕ್ಕಳೇ ಆಗಿದ್ದರೂ, ವಾಲ್ಮೀಕಿಯ ಆಶ್ರಮದಲ್ಲಿ ಜನಿಸಿ, ಋಷಿಕುಮಾರರ ಜೊತೆಯಲ್ಲಿ ಬೆಳೆದರೂ 'ಹುಟ್ಟುಗುಣ ಘಟ್ಟ ಹತ್ತಿದರೂ ಹೋಗದು' ಎಂಬ ಗಾದೆ ಮಾತಿನಂತೆ ಕ್ಷತ್ರಿಯ ಗುಣ, ಕ್ಷಾತ್ರ ತೇಜಸ್ಸು, ಎದುರಿಸುವ ಸಾಮರ್ಥ್ಯ ತಾನಾಗಿಯೇ ರಕ್ತಗತವಾಗಿತ್ತು. ಎಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುವ ಶಕ್ತಿಯನ್ನು ತಾಯಿ ಜಾನಕಿಯಿಂದ ಕಲಿತಿದ್ದರು. ತಾವು ಅಸಮರ್ಥರು, ಕೈಲಾಗದವರು ಎಂದು ಹಿಂದೆ ಸರಿಯದೆ ದಿಟ್ಟತನದಿಂದ ಎದುರಿಸುವ ಗುಣ, ಬಾಲಸಹಜವಾದ ಕುತೂಹಲ, ಸಾಹಸ ಪ್ರವೃತ್ತಿ 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಶ್ರೀರಾಮನನ್ನೇ ಎದುರಿಸಲು ಸಿದ್ಧನಾದ ಗುಣ ಬಾಲ್ಯದಲ್ಲಿಯೇ ಕರಗತವಾಗಿತ್ತು. ಬಾಲ್ಯದಿಂದಲೇ ರೂಢಿಸಿಕೊಂಡ ಧೈರ್ಯ, ಋಷಿಕುಮಾರರ ಸಹಜ ಭಯದ ಗುಣಗಳ ಮೌಲ್ಯಗಳು ಮನೋಜ್ಞವಾಗಿ ಅಭಿವ್ಯಕ್ತವಾಗಿವೆ. | |
| XII. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾಮಂದಿರದಲ್ಲಿನ 'ರಾಯಲ್ ಚಾಪೆಲ್' ಮತ್ತು 'ಸ್ಟೋನ್ ಆಫ್ ಸ್ಕೋನ್'ಗಳ ವಿಶೇಷತೆಯನ್ನು ಕುರಿತು ಬರೆಯಿರಿ.<br>**ಅಥವಾ**<br>ವೂಲವರ್ಥ ಸ್ಟೇಷನರಿ ಅಂಗಡಿ ಹಾಗೂ ಲಂಡನ್ನಿನಲ್ಲಿ ಹೆಣ್ಣನ್ನು ಸತ್ಕರಿಸುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ.<br>***ಉತ್ತರ :***<br>'ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾಮಂದಿರ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ. ಇದರಲ್ಲಿ ಸಂತರು, ಸಾರ್ವಭೌಮರು ಹಾಗೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕವಿಗಳ ಸ್ಮಾರಕಗಳಿವೆ. ಈ ಪ್ರಾರ್ಥನಾ ಮಂದಿರದಲ್ಲಿ ರಾಯಲ್ ಚಾಪೆಲ್ (ರಾಜವಿಭಾಗ) ಎಂಬ ಭಾಗವಿದೆ. ಇಲ್ಲಿ ಇಂಗ್ಲೆಂಡನ್ನು ಆಳಿದ ರಾಜರಿಗೆ ವಿಶಿಷ್ಟ ಸ್ಥಾನ ಕಲ್ಪಿಸಲಾಗಿದೆ. ರಾಜದಂಡ, ಕಿರೀಟ ಒಂದಲ್ಲ ಒಂದು ದಿನ ನೆಲಕ್ಕುರಳಲೇಬೇಕು, ಯಾರೂ ಶಾಶ್ವತವಲ್ಲ ಎಂಬ ಸತ್ಯ ತಿಳಿದಿದ್ದರೂ, ಸತ್ತ ಎಲ್ಲಾ ರಾಜರಿಗೂ ಸ್ಮಾರಕಗಳ ಮೂಲಕ ಗೌರವ ಸಲ್ಲಿಸಿದ್ದಾರೆ. ಬೆನ್‌ಜಾನ್ಸ್‌ನನ್ನು ಜನರು ತುಳಿಯುತ್ತ ನಡೆಯುತ್ತಾರೆ. ಸಿಂಹದೆದೆಯ ರಿಚರ್ಡ್, ೨ನೆಯ ಎಡ್ವರ್ಡ್, ಅರ್ಲ್ ಆಫ್ ಸ್ಟ್ಯಾಫೋರ್ಡ್, ರಾಣಿ ಎಲಿಜಬೆತ್, ೧ನೆಯ ಜೇಮ್ಸ್ ಮೊದಲಾದ ಅರಸ ಅರಸಿಯರ ಸ್ಮಾರಕಗಳು ಈ ರಾಜಮಂದಿರದಲ್ಲಿದೆ. ಗೋರಿಯ ಮೇಲೆ ಈ ವ್ಯಕ್ತಿಗಳು ಮಲಗಿಕೊಂಡಂತೆ ಕೆತ್ತಲಾಗಿದೆ. ಈ ಗೋರಿಗಳ ನಡುವೆ ಹಾದು ಅರಸರ ಪ್ರಾರ್ಥನಾ ಮಂದಿರಕ್ಕ ಹೋಗಬಹುದು. ಇಲ್ಲಿಯ ಕೆತ್ತನೆಯ ಕೆಲಸವನ್ನೆಲ್ಲ ಬಂಗಾರದ ಬಣ್ಣದಲ್ಲಿಯೇ ಮಾಡಲಾಗಿದೆ. ಮಂದಿರದ ಹಿಂಭಾಗದಲ್ಲಿ ೭ನೆಯ ಹೆನ್ರಿಯ ಭವ್ಯದ ಗೋರಿ ಇದೆ.<br><br>'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾಮಂದಿರದ ಮಧ್ಯಭಾಗದಲ್ಲಿ 'ಸ್ಟೋನ್ ಆಫ್ ಸ್ಕೋನ್' ಎಂಬ ಕಲ್ಲುಪಾಟಿಯನ್ನು ಇರಿಸಲಾಗಿದೆ. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಈ ಕಲ್ಲುಪಾಟಿಯನ್ನು ಹಾಕಲಾಗುತ್ತದೆ. ಪಟ್ಟಾಭಿಷೇಕವಾಗುವ ಎಲ್ಲಾ ಸಾಮ್ರಾಟರು ಇದರ ಮೇಲೆಯೇ ಕೂರಬೇಕು. ೩ನೆಯ ಎಡ್ವರ್ಡ್‌ನು ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದಂತೆ ತೋರುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರ ಪಟ್ಟಾಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಈ ಕಲ್ಲಿನಲ್ಲಿ ಯಾವುದೋ ಸಿದ್ಧಿ, ಮಂತ್ರ, ಏನೋ ಒಂದು ವಿಶೇಷತೆ ಇದ್ದಂತೆ ತೋರುತ್ತದೆ.<br><br>**ಅಥವಾ**<br><br>ಲಂಡನ್ ನಗರದ ಪ್ರವಾಸದ ಸಂದರ್ಭದಲ್ಲಿ ಪೇಟೆಯಲ್ಲಿ ತಿರುಗಾಡುತ್ತಿದ್ದಾಗ ಲೇಖಕರು ವೂಲವರ್ಥ ಎಂಬ ಸ್ಟೇಷನರಿ ಅಂಗಡಿಯನ್ನು ನೋಡುತ್ತಾರೆ. ಪ್ರಾಚೀನ ಮಹಾ ಕಾವ್ಯದಂತೆ ಇದೊಂದು ಮಹಾಕೋಶದಂತೆ ತೋರುತ್ತದೆ. ಇಲ್ಲಿ ಎಲ್ಲಾ ತರದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಅಂಗಡಿಯಲ್ಲಿ ವಿವಿಧ ವಿಭಾಗಗಳನ್ನು ನಿರ್ಮಿಸಿರುವ ಚಮತ್ಕಾರ ನೋಡಬೇಕಾದುದು. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿಗಳು ಹೀಗೆ ಎಲ್ಲಾ ವಿಧದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವಸ್ತುಗಳು ವೂಲವರ್ಥ ಸ್ಟೇಷನರಿ ಅಂಗಡಿಯಲ್ಲಿ ದೊರೆಯುತ್ತವೆ. ಸ್ಟ್ರಾಂಡ್‌ದಲ್ಲಿಯ ಸ್ಯಾವ್ಯೊಯ್ ಸಿಂಪಿಗಳು ಐವತ್ತು ಶೀಲಿಂಗಿನ ಸಿಂಪಿಗಳೆಂದೇ ಪ್ರಸಿದ್ಧಿಯಾಗಿದ್ದಾರೆ. ಸಾದಾ ಸೂಟು ಹೊಲಿಯಲು ನೂರು ರೂಪಾಯಿಗಳು ಬೇಕು. ಆದರೆ ಇವರು ಐವತ್ತು ರೂಪಾಯಿಗಳಿಗೆ ಹೊಲಿಯುತ್ತಾರೆ. ಇದರ ಶಾಖೆಗಳು ನಗರದ ಎಲ್ಲಾ ಕಡೆಗಳಲ್ಲೂ ಇವೆ. <br> ಇಂಗ್ಲೆಂಡಿನಲ್ಲಿ ಹೆಣ್ಣುಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯನ್ನು ಕಾಣಬಹುದು. ಇಲ್ಲಿ ಗಂಡಿಗಿಂತ ಹೆಣ್ಣುಮಕ್ಕಳೇ ಹೆಚ್ಚಿದ್ದಂತೆ ಕಾಣುತ್ತದೆ. ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಮಾಣಿಗಳಿಲ್ಲ, ಬೆಂಗಳೂರಿನ ಮಾತಿನಲ್ಲಿ ಹೇಳುವುದಾದರೆ ಅಮ್ಮಣ್ಣಿಗಳಿರುತ್ತಾರೆ. ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್, ಕಾರಕೂನ ಹೆಣ್ಣು ಮಕ್ಕಳೇ ಆಗಿರುತ್ತಾರೆ. ಸಿನಿಮಾಗೃಹಗಳಲ್ಲಿ ಜಾಗ ಹುಡುಕಿಕೊಡುವ ಕೆಲಸ, ಕಾಲೇಜುಗಳಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲತೆಗಾಗಿ ಸಿಪಾಯಿಣಿಯನ್ನು ನೇಮಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಹೆಣ್ಣುಮಕ್ಕಳಿಗೆ ವಿಶೇಷವಾದ ಸ್ಥಾನಮಾನ ನೀಡಿ ಗೌರವಿಸುವ ಸಂಸ್ಕೃತಿ ಇದೆ ಎಂದು ಲೇಖಕರು ತಿಳಿಸಿದ್ದಾರೆ. | |
| 42. | ಸಹಾಯವನ್ನು ನಿರೀಕ್ಷಿಸಿ ಬಂದ ದ್ರೋಣರನ್ನು ದ್ರುಪದ ನಿಂದಿಸಿದ ಸಂದರ್ಭದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ. <br> ***ಅಥವಾ*** <br> 'ಕೆಮ್ಮನೆ ಮೀಸೆವೊತ್ತೆನೇ' ಎಂದು ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ. <br> ***ಉತ್ತರ :*** <br> ದ್ರೋಣರಿಗೆ ಬಡತನ ಬಂದಾಗ ತನ್ನ ಮಗನಾದ ಅಶ್ವತ್ಥಾಮನೊಂದಿಗೆ ದೇಶ ದೇಶಗಳನ್ನು ಸುತ್ತಿ ಪರಶುರಾಮನ ಬಳಿಗ ಬಂದು, ಅವರಿಂದ ದಿವ್ಯಾಸ್ತ್ರಗಳನ್ನು ಪಡೆದು ಹಿಂದಿರುಗುವಾಗ ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿರುವುದು ನನ್ನ ಬಾಲ್ಯದ ಸಹಪಾಠಿ ದ್ರುಪದ ಎಂದು ತಿಳಿದು ಆತನ ಅರಮನೆಗೆ ಬರುತ್ತಾನೆ. ಅಲ್ಲಿದ್ದ ಸೇವಕನನ್ನು ಕರೆದು, 'ನಿಮ್ಮ ಬಾಲ್ಯದ ಗೆಳೆಯ ದ್ರೋಣ ಎಂಬ ಪಾರ್ವ ನಿಮ್ಮನ್ನು ಭೇಟಿಯಾಗಲು ಬಂದಿದ್ದಾನೆಂದು' ತಿಳಿಸಲು ಹೇಳಿದಾಗ ಆ ಸೇವಕ ದ್ರುಪದನಿಗೆ ಹಾಗೆಯೇ ಹೇಳುತ್ತಾನೆ. ಆದರೆ ದ್ರುಪದ 'ಅವನಾರಿಗೋ ಭ್ರಾಂತಿ ಇರಬೇಕು. ದ್ರೋಣನೆಂಬ ಬ್ರಾಹ್ಮಣ ನನಗೆ ಹೇಗೆ ಗೆಳೆಯನಾಗಲು ಸಾಧ್ಯ ? ಆತನನ್ನು 'ಹೊರನೂಕು' ಎಂದು ಹೇಳಿದ ಮಾತನ್ನು ಸೇವಕ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಬಂದು ದ್ರೋಣನಿಗೆ ಹಾಗೆಯೇ ಹೇಳುತ್ತಾನೆ. ಆಗ ದ್ರೋಣನೇ ಒತ್ತಾಯ ಪೂರ್ವಕವಾಗಿ ಒಳಬಂದು ದ್ರುಪದನನ್ನು ಕುರಿತು, "ನೀವು, ನಾವು ಜೊತೆಯಲ್ಲಿ ಓದಿದ್ದು ನೆನಪಿಲ್ಲವೇ ?" ಎಂದಾಗ "ರಾಜನಿಗೂ, ಬ್ರಾಹ್ಮಣನಿಗೂ ಎಲ್ಲಿಯ ಗೆಳೆತನ, ಇಷ್ಟು ನಾಚಿಕೆಗೆಟ್ಟ ಮನುಷ್ಯರೂ ಇರುತ್ತಾರೆಯೇ ? ಈತನನ್ನು ಎಳೆದು ಆಚೆ ಹಾಕಿರಿ" ಎಂದು ದ್ರುಪದ ಹೇಳುತ್ತಾನೆ. ಆಗ ದ್ರೋಣನು "ಐಶ್ವರ್ಯ ಬಂದರೆ ಮದ್ಯ ಕುಡಿದವರಂತೆ ಆಡುತ್ತಾರೆ ಎಂಬುದು ನಿಜವಾಯಿತು. ಮಾತು ತಪ್ಪುತ್ತದೆ, ಮುಖದಲ್ಲಿ ವಕ್ರತೆ ಉಂಟಾಗುತ್ತದೆ, ನಾಚಿಕೆಗೆಟ್ಟವರಂತೆ ವರ್ತಿಸುತ್ತಾರೆ, ಸಂಬಂಧವನ್ನೇ ಮರೆಯುತ್ತಾರೆ. ಇದನ್ನೆಲ್ಲ ನೋಡಿದರೆ ಸಿರಿಯು ಮದ್ಯದೊಂದಿಗೆ ಹುಟ್ಟಿದೆ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ. ದುಷ್ಟನೊಣಕ್ಕೆ ತಿಪ್ಪೆಯೇ ಶ್ರೇಷ್ಠ. ನಿನ್ನ ಪರಾಕ್ರಮ ನನ್ನವರೆಗೂ ಬರಲು ಸಾಧ್ಯವಿಲ್ಲ. ಇಬ್ಬರೂ ಜೊತೆಯಲ್ಲಿಯೇ ಓದಿದ್ದೇವೆ ಎಂಬ ಒಂದೇ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾಗುತ್ತಿಲ್ಲ. ಆದರೆ ತುಂಬಿದ ಸಭೆಯಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ಬಂಧಿಸದೆ ಬಿಟ್ಟರೆ ನಾನು ಮೀಸೆ ಹೊತ್ತಿರುವುದು ವ್ಯರ್ಥವಾಗುವುದಿಲ್ಲವೇ ?" ಎಂದು ಪ್ರತಿಜ್ಞೆ ಮಾಡಿದನು.

***ಅಥವಾ***

ಯಜ್ಞಸೇನ ಎಂಬ ಗುರುಗಳ ಬಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ದ್ರೋಣ ಮತ್ತು ದ್ರುಪದರು ಸಹಪಾಠಿಗಳಾಗಿದ್ದರು. ಶಿಕ್ಷಣ ಮುಗಿಸಿ ಬೀಳ್ಕೊಡುವಾಗ ದ್ರುಪದನು 'ತಾನು ದೊರೆಯಾದ ಬಳಿಕ ನನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ' ದ್ರೋಣನಿಗೆ ಹೇಳಿದ್ದನು. ದ್ರೋಣನಿಗೆ ಬಡತನ ಬಂದಾಗ ದೇಶದೇಶ ಸುತ್ತಿ ಪರಶುರಾಮನಲ್ಲಿಗೆ ಬಂದು ದಿವ್ಯಾಸ್ತ್ರಗಳನ್ನು ಪಡೆದು ಹಿಂದಿರುಗುತ್ತಿದ್ದಾಗ ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ದ್ರುಪದ ಆಡಿದ ಮಾತುಗಳು ನೆನಪಾದವು. ಈ ವೇಳೆಗೆ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿರುವ ವಿಷಯ ತಿಳಿದು ಸಹಾಯವನ್ನು ನಿರೀಕ್ಷಿಸಿ ಆತನ ಅರಮನೆಗೆ ಬಂದನು. ಅಷ್ಟೊತ್ತಿಗಾಗಲೇ ದ್ರುಪದನಿಗೆ ಅಧಿಕಾರದ ಮದ ಆವರಿಸಿತ್ತು. ಸಹಾಯ ಅರಸಿ ಬಂದ ದ್ರೋಣನನ್ನು ಸಹಪಾಠಿ ಎಂದೂ ಗುರುತಿಸದೆ ಮದೋನ್ಮತ್ತನಾಗಿ ಅವಮಾನಗೊಳಿಸಿ, ಆತನನ್ನು ಹೊರಗಟ್ಟಲು ಆದೇಶಿಸುತ್ತಾನೆ. ದ್ರುಪದನ ಗರ್ವ, ಅಹಂಕಾರ, ಮದ, ಅಸಹನೆ, ಅಗೌರವ, ಸ್ವಪ್ರತಿಷ್ಠೆಯನ್ನೆಲ್ಲ ಕಂಡು ಐಶ್ವರ್ಯ ಹೆಂಡದೊಡನೆ ಹುಟ್ಟಿದೆ. ಸಿರಿಯ ಮದದಿಂದ ಮಾತು ತಪ್ಪುತ್ತದೆ, ಸಂಬಂಧ ಮರೆಸುತ್ತದೆ, ನಾಚಿಕೆ ಬಿಟ್ಟವರಂತೆ ವರ್ತಿಸುತ್ತಾರೆ. ದ್ರುಪದನ ಮಾತುಗಳು, ವರ್ತನೆಯಿಂದ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದ್ರೋಣರಿಗೆ ಮರ್ಮಾಘಾತವಾಗುತ್ತದೆ. ಅಲ್ಲಿಯೇ ಕೊಂದು ಬಿಡಬೇಕೆಂಬ ಕೋಪ ಬರುತ್ತದೆ. ಆದರೆ ಜೊತೆಯಲ್ಲಿ ಓದಿದ ಒಂದೇ ಒಂದು ಕಾರಣದಿಂದ ತಾನೇ ಆತನನ್ನು ಕೊಲ್ಲಲು ಮನಸ್ಸಾಗದೆ ಹಾಗೆಯೆ ಬಿಡುತ್ತಾನೆ. ದ್ರುಪದನನ್ನು ಕುರಿತು, 'ತುಂಬಿದ ಸಭೆಯಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ಮುಂದೊಂದು ದಿನ ನನ್ನ ಶಿಷ್ಯರಿಂದಲೇ ನೀನು ಗಾಬರಿಗೊಳ್ಳುವಂತೆ ನಿರಾಯಾಸವಾಗಿ ಬಂಧಿಸದೆ ಬಿಟ್ಟರೆ 'ಕೆಮ್ಮನೆ ಮೀಸೆವೊತ್ತೆನೇ ?' ಎಂದು ಶಪಥಗೈಯುತ್ತಾನೆ. | |
| XIII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 1 × 4 = 4 ( 2 + 2 ) |
| | ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ ಸ್ವತ್ತಲ್ಲ, ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.<br><br>ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ. | |
| 43. | *ಪ್ರಶ್ನೆಗಳು :*<br>ಅ) ಧರ್ಮದ ಬಗೆಗೆ ಬಸವಣ್ಣನವರ ನಿಲುವು ಏನಾಗಿತ್ತು ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬ) ಬಸವಣ್ಣನವರು ಏಕೆ ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ ? | |
| | ***ಉತ್ತರ :*** | |
| | ಅ) ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ ಸ್ವತ್ತಲ್ಲ. ಎಲ್ಲರ ಆಸ್ತಿಯಾಗಬೇಕು, ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಧರ್ಮದ ಬಗೆಗೆ ಬಸವಣ್ಣನವರ ನಿಲುವು ಆಗಿತ್ತು. | |
| | ಬ) 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗದ ಸಾಮರಸ್ಯ ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪ್ರಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ ಮತ್ತು ಅನಿವಾರ್ಯವಾಗಿದೆ. ಆದ್ದರಿಂದಲೇ ಬಸವಣ್ಣನವರು ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ. | |
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 44. | ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಆರಾಧನಾ' ಎಂದು ಭಾವಿಸಿಕೊಂಡು, ತಾರಾಲಯದ ವೀಕ್ಷಣೆಗೆ ಸಮಯಾವಕಾಶ ಕೋರಿ ಬೆಂಗಳೂರಿನ ನೆಹರೂ ತಾರಾಲಯದ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ 'ಅಹನಿ' ಎಂದು ಭಾವಿಸಿಕೊಂಡು, 'ಗ್ರಂಥ ಸಪ್ತಾಹ'ದ ಅಡಿಯಲ್ಲಿ ಹಮ್ಮಿಕೊಳ್ಳಲಾದ 'ಪುಸ್ತಕ ಪ್ರದರ್ಶನ' ಕಾರ್ಯಕ್ರಮಕ್ಕೆ ಆಹ್ವಾನಿಸಿ ಹಾಸನದ ವಿವೇಕಾನಂದನಗರದಲ್ಲಿ ವಾಸವಾಗಿರುವ 'ಯಜತ್' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | *ಖಾಸಗಿ / ಗೆಳೆಯನಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| XV. | **ಪ್ರಬಂಧ ಬರೆವಣಿಗೆ :** | $1 \times 5 = 5$ |
| 45. | ಶಾಲೆಯಲ್ಲಿ ಮತದಾರರ ಜಾಗೃತಿ ಕ್ಲಬ್‌ನ ಚಟುವಟಿಕೆಗಳು. | |
| | ***ಅಥವಾ*** | |
| | ಬಾಹ್ಯಾಕಾಶ ಯೋಜನೆಯಲ್ಲಿ ಭಾರತದ ಸಾಧನೆ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |